ಮೋತಿ ಮಾಗ್ರಿ

ಕಡೆ ಸಾರ್ವಜನಿಕರಿಗೆ ಪ್ರವೇಶವಿದೆ. ಅರಮನೆಯ ಗೋಡೆಗಳಲ್ಲಿ ಕೆಲವು ಕಡೆ ಹೊಳೆಯುವ ಹಿತ್ತಾಳೆಯಿಂದ ಮಾಡಿದ ಸೂರ್ಯನ ಮುಖದ ಲಾಂಛನವಿದೆ. ಮೇವಾಡದ ರಾಜರು ಸೂರ್ಯನ ಆರಾಧಕರು. ಬೆಳಿಗ್ಗೆ ಉಪಹಾರದ ಮೊದಲು ಸೂರ್ಯ ದರ್ಶನ ಮತ್ತು ಪೂಜೆ ಆಗಲೇಬೇಕಿತ್ತು.

'ಮೋರ್ ಚೌಕ್'ನ ಗೋಡೆಯೊಂದರಲ್ಲಿ ಮೂರು ನವಿಲಿನ ಚಿತ್ರಣವಿದೆ, ಹಸಿರು, ನೀಲಿ ಮತ್ತು ಚಿನ್ನದ ಬಣ್ಣವಿರುವ ಐದು ಸಾವಿರ ಗಾಜಿನ ಚೂರುಗಳಿಂದ ಅಲಂಕಾರ ಮಾಡಲ್ಪಟ್ಟಿದೆ. 'ಅಮರ ವಿಲಾಸ್' ಅರಮನೆ ಸಂಕೀರ್ಣದ ಅತೀ ಎತ್ತರದ ಜಾಗ. ಇಲ್ಲಿ ಸುಂದರವಾದ ಕಾರಂಜಿಯಿರುವ ಉದ್ಯಾನ, ಗೋಪುರ ಮತ್ತು ತಾರಸಿಯಿದೆ.

ಅರಮನೆಯ ಸಂಕೀರ್ಣ ದೊಡ್ಡದಿದ್ದರೂ ಮೆಟ್ಟಿಲುಗಳು ಚಿಕ್ಕವು. ಆವರಣಗಳೂ ಅಂಕುಡೊಂಕಾಗಿವೆ. ಇದು ಶತ್ರುಗಳು ಸುಲಭದಲ್ಲಿ ಒಳಗೆ ನುಗ್ಗದಂತೆ ಮತ್ತು ದಾರಿ ತಪ್ಪಿಸಲು ಮಾಡಿದ ಉಪಾಯವೆನ್ನುತ್ತಾರೆ. ಅರಮನೆಯ ಮೇಲಿನ ಚಾವಣಿಯಿಂದ ಉದಯಪುರ ನಗರ ಮತ್ತು ಸುತ್ತ ಇರುವ ಸರೋವರಗಳನ್ನೂ ನೋಡಬಹುದು.

ಸಂಕೀರ್ಣದಲ್ಲಿರುವ 2 ದೊಡ್ಡ ಅರಮನೆಗಳು ಹೊಟೇಲ್‌ಗಳಾಗಿವೆ. ಸಂಕೀರ್ಣದಲ್ಲಿ ಈಗ ಪೋಸ್ಟ್ ಆಫೀಸ್, ಬ್ಯಾಂಕ್, ಟ್ರಾವೆಲ್ ಏಜನ್ಸಿ, ಚಿಕ್ಕ ಪುಟ್ಟ ಅಂಗಡಿಗಳಿವೆ. ಅರಮನೆಯ ಒಂದು ಭಾಗವನ್ನು ಸಂಗ್ರಹಾಲಯವಾಗಿಸಿ ಆಗಿನ ಕಾಲದ ಪಾತ್ರೆಗಳು, ಯುದ್ಧ ಸಾಮಗ್ರಿಗಳು, ಪೇಂಟಿಂಗ್‌ಗಳು, ಪೀಠೋಪಕರಣಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಈಗ ಅರಮನೆ ಸಂಕೀರ್ಣ ಮೇವಾಡ ರಾಜ ಮನೆತನದ ಅಧೀನದಲ್ಲಿದೆ. ವಿವಿಧ ಟ್ರಸ್ಟ್‌ಗಳ ಉಸ್ತುವಾರಿಯಲ್ಲಿದೆ.

ಲೇಕ್ ಪ್ಯಾಲೇಸ್: ಇದು ಬೇಸಿಗೆಯ ಅರಮನೆ. ಪಿಚೋಲ ಸರೋವರದ ಮಧ್ಯದಲ್ಲಿರುವ 'ಜಗ ನಿವಾಸ' ದ್ವೀಪದಲ್ಲಿದೆ. ಪೂರ್ವ ದಿಕ್ಕಿಗೆ ಮುಖ ಮಾಡಿಕೊಂಡಿರುವ ಅರಮನೆಗೆ ಕಪ್ಪು ಮತ್ತು ಬಿಳಿ ಅಮೃತ ಶಿಲೆ ಬಳಸಲಾಗಿದೆ. ಗೋಡೆಗಳಿಗೆ ಬೆಲೆ ಬಾಳುವ ಹರಳುಗಳ ಅಲಂಕಾರವಿದೆ. ಈಗ ಇದು ಪಂಚತಾರಾ 'ತಾಜ್ ಹೊಟೇಲ್'! ಸಾಮಾನ್ಯ ಜನರಿಗೆ ಪ್ರವೇಶವಿಲ್ಲ. ಹೊಟೇಲ್‌ಗೆ ಮೋಟಾರ್ ಬೋಟ್ ಮೂಲಕ ಹೋಗುವ ವ್ಯವಸ್ಥೆ ಇದೆ.

ಫತೇಹ್ ಸಾಗರ ಸರೋವರ: ಇದೊಂದು ಮಾನವ ನಿರ್ಮಿತ ಸರೋವರ. ಇದನ್ನು ಮೊದಲಿಗೆ ರೂಪಿಸಿದ್ದು ಮಹಾರಾಣಾ ಜೈ ಸಿಂಘ್. ರಾಜ ಫತೇಹ ಸಿಂಘ್ ಇದನ್ನು ನವೀಕರಿಸಿ ಇದರ ಉದ್ದ, ಅಗಲವನ್ನು ಜಾಸ್ತಿ ಮಾಡಿದ. ಹೀಗಾಗಿ ಫತೇಹ ಸಿಂಘನ ಹೆಸರನ್ನೇ ಸರೋವರಕ್ಕಿಡಲಾಯಿತು. ಸರೋವರದ ಮಧ್ಯದಲ್ಲಿ ಮೂರು ದ್ವೀಪಗಳಿವೆ. ಅವುಗಳಲ್ಲಿ ಪಾರ್ಕ್, ಪ್ರಾಣಿ ಸಂಗ್ರಹಾಲಯ, ಕಾರಂಜಿ ಮತ್ತು ಸೌರ ವೀಕ್ಷಣಾಲಯವಿದೆ. 2017ರಲ್ಲಿ 'ಅಂಡರ್ ದಿ ಸನ್' ಎಂಬ ಅಕ್ವೇರಿಯಂ ಅನ್ನು ಇಲ್ಲಿ ಉದ್ಘಾಟಿಸಲಾಯಿತು.

ಪಿಚೋಲ ಸರೋವರ: ಇದು ನಗರದ ಮಧ್ಯ ಭಾಗದಲ್ಲಿದೆ. ಉದಯಪುರದ ಅತಿ ದೊಡ್ಡ ಸರೋವರವಿದು. ಇದರ ಸುತ್ತ ಅರಮನೆಗಳು, ದೇವಾಲಯಗಳು, ಸ್ನಾನದ ಘಾಟ್‌ಗಳು ಇವೆ. ಸರೋವರದಲ್ಲಿ ಹಲವು ದ್ವೀಪಗಳಿವೆ. ಪ್ರಸಿದ್ಧ ಲೇಕ್ ಪ್ಯಾಲೇಸ್, ಜಗ್ ಮಂದಿರ ಇಲ್ಲಿವೆ. ಸೂರ್ಯ ಮುಳುಗುವ ಸಮಯದಲ್ಲಿ ಈ ಸರೋವರದ ದೋಣಿ ಪಯಣ ಮರೆಯಲಾಗದ ಅನುಭವ ಕೊಡುತ್ತದೆ. ರಾತ್ರಿಯಲ್ಲಿ ಅರಮನೆಯ ಜಗಮಗಿಸುವ ದೀಪಗಳ ಬಿಂಬ ಸರೋವರದಲ್ಲಿ ಸುಂದರ ದೃಶ್ಯ ಮೂಡಿಸುತ್ತದೆ.

ಸಹೇಲಿಯೊಂಕೀ ವಾಡಿ: ಮಹಾರಾಣಾ ಸಂಗ್ರಾಮ ಸಿಂಘ್ ತನ್ನ ಹೆಂಡತಿ ಮತ್ತು ತವರಿನಿಂದ ಬಂದ 48 ದಾಸಿಯರಿಗೋಸ್ಕರ ಕಟ್ಟಿಸಿದ ಉದ್ಯಾನವಿದು. ರಾಣಿ ಬೇಸರ ಕಳೆಯಲು ತನ್ನ ಸಖಿಯರೊಂದಿಗೆ ಇಲ್ಲಿಗೆ ಬರುತ್ತಿದ್ದಳಂತೆ. ಇಲ್ಲಿರುವ ಲತಾ ಮಂಟಪ, ಅಮೃತಶಿಲೆಯಲ್ಲಿ ಅರಳಿದ ಕಲೆ ಮತ್ತು ಕುಸುರಿ ಕೆಲಸ, ಸುತ್ತಮುತ್ತ ಇರುವ ಮರ ಗಿಡಗಳು, ಬಣ್ಣ ಬಣ್ಣದ ಹೂವುಗಳು, ಹಸಿರು ಹುಲ್ಲಿನ ಲಾನ್, ತಾವರೆಯ ಕೊಳಗಳು, ನಲಿದಾಡುವ ಕಾರಂಜಿಗಳು ಮತ್ತು ಬಣ್ಣದ ದೀಪಗಳ ಅಲಂಕಾರ ಎಲ್ಲವೂ ನಮ್ಮನ್ನು ರೋಮಾಂಚನಗೊಳಿಸುತ್ತದೆ.

ವಾಡಿಯಲ್ಲಿ ಒಟ್ಟು ನಾಲ್ಕು ಕೊಳಗಳಿವೆ. ಮಧ್ಯದಲ್ಲಿ ಕಾರಂಜಿಗಳಿವೆ, ಅಮೃತಶಿಲೆಯಲ್ಲಿ ಕೆತ್ತಿದ ಆನೆಗಳು, ಪಕ್ಷಿಗಳ ಸೊಂಡಿಲಿನಿಂದ ಮತ್ತು ಕೊಕ್ಕಿನಿಂದ ನೀರು ಚಿಮ್ಮುತ್ತಿರುತ್ತದೆ. ಪಕ್ಕದಲ್ಲೊಂದು ಮ್ಯೂಸಿಯಂ ಇದೆ.






ರಾಣಾ ಪ್ರತಾಪ ಮ್ಯೂಸಿಯಂನಲ್ಲಿರುವ ಕಂಚಿನ ಪ್ರತಿಮೆಗಳು